SATYAVADI= An Anglo Kannada Weekly. Published Every Saturday

Reg. No. M-1299

ಸತ್ಯವಾದಿ

ಬಿಡಿ ಪತ್ರಿಕೆ ೬ಪೈ

ವಾರ್ಷಿಕ ಜಂಬಾ 1—0—0] ಪ್ರತಿ ಶನಿವಾರ ಪ್ರಕಟಿಸಲ್ಪಡುವುದು. [ಅಂಚೆ ವೆಚ್ಚ ಸಮೇತ 2—0—0

ಸಂಪುಟ 4.] ಮೈಸೂರು, ಶನಿವಾರ, 1ನೇ ಅಕ್ಟೋಬರ್ 1921 [ಸಂಚಿಕೆ 18

ಲೇಖಕರಿಗೆ ಸೂಚನೆ

ಉಪಲೇಖಕರು ಪಡುವ ಅಭಿಪ್ರಾಯಕ್ಕೆ ನಾವು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸಕಲರೂ ತಿಳಿಯತಕ್ಕದ್ದು.

ಇತರ ಪತ್ರಿಕೆಗಳಿಗೆ ಕಳುಹಿಸಿದ ಲೇಖನಗಳು ನಮಗೆ ಕಳುಹಿಸಬೇಕಾದ್ದಿಲ್ಲ

ಆಯಾ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದವಿಷಯಗಳು ಆಯಾ ಶನಿವಾರದ ಹಿಂದಿನ ಬುಧವಾರದೊಳಗೆ ನಮ್ಮ ಕರಗತವಾಗಬೇಕು.

ಉತ್ತಮವಾದ ಹಾಸ್ಯರಸದಿಂದೊಡಗೂಡಿದ ಪ್ರಜಾಜ್ಞೇಮಾಭಿವೃದ್ಧಿ ವಿಷಯವಾದ ಲೇಖನಗಳು ಆದರದಿಂದ ಸ್ವೀಕರಿಸಲ್ಪಡುವುವು.

ಮೊರುತೀ ಅಂಡ್ ಕೋ

ಟಿ. ಕೃಷ್ಣಶಾಸ್ತ್ರಿಗಳ ಆಯುರ್ವೇದೀಯ ಔಷಧಗಳು

1. ಮಾರುತೀ ಅಂಜನ 2. ರೆಂಡ್ ಆಯಿಂಟ್‌ಮೆಂಟ್ 3, ಭೃಂಗಾಮಲಕ ತೈಲ 4. ಬಿಲ್ವಾದಿ ರಸಾಯನ 5. ಅಶ್ವಗಂಧೀ ರಸಾಯನ 6. ಗೋರೋಚನ ಕಸ್ತೂರಿ ಮಾತ್ರೆ ಮೇಲ್ಕಂಡ ಔಷಧಿಗಳು " ಮಾರುತೀ ಅಂಡ್ ಕೋ " ಯವರಲ್ಲಿ ಸಿಕ್ಕುತ್ತವೆ ಕ್ಯಾಟಲಾಗಿಗಾಗಿ ಯಬರೆರಿ ಫ್ರೀಯಾಗಿ ಕಳುಹಿಸುತ್ತೇವೆ ಮತ್ತು ಜಾತಕದ ಫಲಗಳನ್ನು ಬರೆಯುತ್ತೇವೆ ಫೀ ಫಾರ್ಜ್ 10-0-0 ಒಂದು ತಿಂಗಳ ಜಾತಕವನ್ನು ಫ್ರೀಯಾಗಿ ಬರೆದು ಕೊಡುತ್ತೇವೆ ನಂ 1, 8 ಆ ನಂ 2, 8. ಆ ನಂ 3, 1-8 0. ರೂ ನಂ 4, 1-8-0 ರೂ ನಂ 5, 1-8-0 ರೂ ನಂ 6, 4. ಆ

ಮ್ಯಾನೇಜರ್ ಟಿ. ಕೆ. ಸುಬ್ಬಾಶಾಸ್ತ್ರಿ.

ಮಾರುತೀ ಅಂಡ್ ಕೋ ಮೈಸೂರು.

ಮೈಸೂರುದೇಶದಲ್ಲಿ ಹೊಸ ಸೃಷ್ಟಿ

ಅತ್ಯುತ್ತಮವಾದ ಲೆದರ್ ಬ್ಯಾಗ್‌ಗಳು ಕಾಸ್ ಬ್ಯಾಗ್‌ಗಳು ಸೂಟ್ ಕೇಸುಗಳು ನಮ್ಮಲ್ಲಿ ತಯಾರಾಗುತ್ತವೆ ನಿಮಗೆ ಬೇಕಾದ ಅಳತೆ ಮತ್ತು ನಮೂನೆಯಲ್ಲಿ ತೃಪ್ತಿಕರವಾಗಿ ಸಿದ್ಧಮಾಡಿ ಕೊಡುತ್ತೇವೆ. ಕ್ರಯ ಬಹುಸುಲಭ ಸ್ವದೇಶಿ ಮಕೆಲಸ. ಅಲ್ಲದೆ ನಮ್ಮಲ್ಲಿ ಪೋಟೊ ಮೆಂಟ್ ಪೆಯಿಂಟರ್ ಕೆಲಸಗಳು ಉತ್ತಮತರಹ ಸ್ಕೂನ್ ಬೋರ್ಡುಗಳು ತಯಾರಾಗುತ್ತದೆ.

ಎ. ಯಸ್. ಸುಬ್ಬರಾವ್ ಆರ್ಟಿಸ್ಟ್

ಅಂಡ್ ಮೆಡಲಿಸ್ಟ್ ಕಲಾಮಂದಿರ ಬೆಂಗಳೂರು

GOOD SEEDS

As good as can be grown Sow the right kind of seed at the right season and save disappointment. We have just the right kind of seeds for Indian climate— both flower and vegetable

Beautifully illustrated large descripeh tive catalogue free on application. (Please mention this paper when writing. Please correspond in English only)

PESTONJEE P. POCHA & SONS

Seed Merchants, POONA.

ಶುಭೋದಯ

ರಾಜಕೀಯ, ಧಾರ್ಮಿಕ, ಸಾಮಾಜಿಕ ಮೊದಲಾದ ಮಹತ್ವವುಳ್ಳ ವಿಷಯಗಳನ್ನು ನಮ್ಮ ನಾಡಿನ ಭಾಷೆಯಲ್ಲಿ ಚರ್ಚಿಸಿ, ಜನತೆಯಲ್ಲಿ ಜಾಗ್ರತಿಯನ್ನುಂಟುಮಾಡುವುದೇ ಈ ಪತ್ರಿಕೆಯ ಮುಖ್ಯೋದ್ದೇಶವು. ಕನ್ನಡ ಭಾಷೆಗೆ ಚಿತ್ತಾಕರ್ಷಕ ಸ್ವರೂಪವನ್ನು ಕೊಟ್ಟು ದೇಶೋನ್ನತಿಯ ವಿಷಯಗಳ ಕಡೆಗೆ ವಾಚಕರ ಲಕ್ಷವನ್ನು ಎಳೆಯುವದಕ್ಕೆ ಯತ್ನಿಸುತ್ತಿರುವದು. ಉಪಯುಕ್ತವಾದ ಎಲ್ಲ ತರದ [illegible]ಗಳೂ ಬರುವವು ಕರ್ನಾಟಕದ ಕಲ್ಯಾಣ ಕಾಂಕ್ಷಿ[illegible] ಅವಶ್ಯವಾಗಿ ಓದಲೇಬೇಕು. ವಾರ್ಷಿಕಜಂ[illegible] ಅಂಚೆ ವೆಚ್ಚ ಸೇರಿ ೩-೧೪-೦

ವಿಳಾಸ:— ಸಂಪಾದಕ, ಶುಭೋದಯ, ಧಾರವಾಡ

How to Learn Hindi

By

Pandit Satyavrata Sidhantalankar

Highly spoken of

By Dr. Subrahmani [illegible]

C. Jinarajdas, C. R. Reddy [illegible] Swami Sharadahanda. Send Rs 1 at once to save disappointment. Postage extra.

Secretary ARYASAMAJ

Basavangudi BANGALORE

ಸತ್ಯಮೇವ ಜಯತೇ (ಗುಣವಾಗದಿದ್ದರೆ ಹಣ ಪರ್ಸ್)

ಧಾತುಪೌಷ್ಟಿಕ, ಕಾಮೋತ್ತೇಜನ, ಇಂದ್ರಿಯಸ್ತಂಭಕ

ಮದನೋದ್ಭವ ಗುಳಿಗೆ

ಜನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ ಸ್ವಪ್ನಾವಸ್ಥೆ, ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋದಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟೂಕಿ) ಗುಪ್ತ ಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು. ಕಟಿಶೂಲೆ, ವಾತರೋಗವು ಮುಂತಾದವು ಅತಿತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯು ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಶೇವಿಸುವಾಗ್ಗೆ ನಪುಸಂಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ

ನಪುಸಂಕತ್ವಾರಿ ತೈಲವು

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ಕ ಬಾಹೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಜೈತನ್ಯವನ್ನುಂಟುಮಾಡಿ ರತಿಸುಜಪನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿಕ್ಕೆ ೨ ರೂ. ೧೨ ಆಣೆ ಅನುಪಾನ ಪತ್ರಿಕೆ ಔಷಧ ಸಂಗಡ. ಟವಾಲಖರ್ಚು ಬೇರೆ

ವಿಳಾಸ:— ವೈದ್ಯ ಜಿ. ಎಲ್. ಜೋತಿ ಮತ್ತು ಕಂಪೆನಿ ಸಿ ಪೋಷ್ಟ ಬನವಾಸಿ ಉತ್ತರ ಕಾನಡಾ.

ಸಚಿತ್ರ ಲೋಕಬಂಧು

ಧಾರವಾಡದಲ್ಲಿ ಪ್ರತಿ ವಾರವೂ ಹೊರಡತಕ್ಕ ಮೇಲೆ ಬರೆದ ಹೆಸರಿನ ರಾಷ್ಟ್ರೀಯ ಪಕ್ಷದ ಪತ್ರದಲ್ಲಿ ಸದ್ಯಪ್ರಸಂಗದ ನಾನಾಪ್ರಕಾರದ ವಿಷಯಗಳ ಮೇಲಿನ ಚಿತ್ರಗಳು ಕೊಡಲ್ಪಡುವವು ಕನ್ನಡದಲ್ಲಿ ಚಿತ್ರಯುಕ್ತವಾದ ಪತ್ರವು ಇದೊಂದೇ. ಈ ಪತ್ರವನ್ನು ಬೇಕಾದಾಗ್ಗೆ ಪ್ರಾರಂಭಿಸಲಿಕ್ಕೆ ಒರುವದು.

ಚಿತ್ರಯುಕ್ತ ಲೋಕಬಂಧು— ವಾ ವರ್ಗಣಿ. ೪-೦-೦ ಬೇಕಾದವರು ಕಳಗಿನ ವಿಳಾಸಕ್ಕೆ ಬರೆಯ್ಯ

ಸಂಪಾದಕ, ಲೋಕಬಂಧು ಧಾರವಾಡ

ಸ್ವದೇಶೆ.

—:o:—

ಸ್ವರಾಜ್ಯಕ್ಕೆ ಸ್ವದೇಶಿ ಮೂಲಾಧಾರ.

ನೀವುಗಳು ಸ್ವದೇಶಾಭಿವೃದ್ಧಿಯಲ್ಲಿ ಉದ್ಯುಕ್ತರಾದರೆ ಆಲ್ಪಕ್ರಯಕ್ಕೆ ಹೆಚ್ಚು ಲಾಭವನ್ನು ಹೊಂದುವುದಲ್ಲದೆ ನೀವುಗಳು ನಿಮ್ಮ ದೇಶದ ವ್ಯಾಪಾರಕ್ಕೆ ಉತ್ತೇಜನ ಕೊಡುವುದರ ಮೂಲಕ ಹಿಂದೂಸ್ಥಾನದ ದಾರಿದ್ರವನ್ನು ಹೋಗಲಾಡಿಸಿದಂತಾಗುತ್ತದೆ. ಪರದೇಶದ ಬಟ್ಟೆಗಳಿಗೆ ನೀವುಗಳು ವ್ಯಯಮಾಡತಕ್ಕ ಪ್ರತಿಯೊಂದು ದುಗ್ಗಾಣಿಯೂ ಹಿಂದೂಸ್ಥಾನವನ್ನು ದಾರಿದ್ರ್ಯವಸ್ಥೆಗೆ ತರುತ್ತದೆ. ಆದುದರಿಂದ ಸ್ವದೇಶಿ ಸ್ವೀಕಾರಮಾಡಿರಿ.

"ಸತ್ಯವಾದಿ"

ಮೈಸೂರು ಶನಿವಾರ 1 ನೇ ಅಕ್ಟೋಬರ್ 1921

ಮಹಾತ್ಮರ ವರ್ಧಂತ್ಯುತ್ಸವ.

———

ಮಹಾತ್ಮಾ ಮೋಹನದಾಸ ಕರ್ಮಚಂದ ಗಾಂಧಿಯವರ 53 ನೆ ವರ್ಧಂತ್ಯುತ್ಸವವು ನಮ್ಮ ಭರತಖಂಡದಲ್ಲೆಲ್ಲಾ ಒಹಳ ವಿಜೃಂಭಣೆಯಿಂದ ನಡೆಸಲ್ಪಟ್ಟಿತು. ಮಹಾತ್ಮರು ನಮ್ಮ ಭಾರತಭೂಮಿಯಪರವಾಗಿಯೂ ಹೊಡೆದಾಡುತ್ತಿರುವರು. ಇವರಂತೆ ದೇಶಸೇವೆಯನ್ನು ಹಿಂದೆ ಯಾರೂ ಮಾಡಿಲ್ಲ ; ಮುಂದೆ ಯಾರೂ ಮಾಡಲಾರರೆಂದು ಹೇಳಿದರೂ ತಪ್ಪಾಗಲಾರದು. ಈ ದೇಶಬಂಧುವು ಅಹಿಂಸೆಯನ್ನೇ ಮೂಲಮಂತ್ರವಾಗಿಟ್ಟುಕೊಂಡು ಶತ್ರುಗಳಿಗೂ ಕೂಡ ಹಿತವನ್ನು ಕೋರುತ್ತಾ ದೇಶಸೇವೆಯನ್ನು ಮಾಡುತ್ತಿರುವರು. ಪ್ರತಿಯೊಬ್ಬ ಭಾರತೀಯನೂ ಇವರ ಮೇಲ್ಪಂಗ್ತಿಯನುಸರಿಸಿ ನಡೆದರೆ ಸ್ವರಾಜ್ಯವು ಸಧ್ಯದಲ್ಲೇ ಹಸ್ತಗತವಾಗುವುದರಲ್ಲಿ ಸಂದೇಹವಿಲ್ಲ. ಭಗವಂತನು ಮಹಾತ್ಮರಿಗೆ ಚಿರಾಯು ರಾರೋಗ್ಯವನ್ನು ದಯಪಾಲಿಸಲೆಂದು ನಾವು ಸದಾ ಆತನನ್ನು ಪ್ರಾರ್ಥಿಸುತ್ತೇವೆ.

ವರ್ತಮಾನಸಂಗ್ರಹ.

———

ಭಾರತದಲ್ಲಿ ವ್ಯಾಪಾರಸ್ಥರಿಗೂ ಗಿರಾಕಿಗಳಿಗೂ ಕಲಹ ಪ್ರಾರಂಭವಾಗಿ ಅಂಗಡಿಗಳು ಲೂಟಿಮಾಡಲ್ಪಟ್ಟವಂತೆ.

ನಾಗಪುರದಲ್ಲಿ 90 ಮಂದಿ ವ್ಯಾಪಾರಸ್ಥರು ಅನ್ಯದೇಶದ ಬಟ್ಟೆಗಳನ್ನು ತಾವು ತರಿಸಿ ಮಾರುವುದಿಲ್ಲವೆಂದು ಬರೆದುಕೊಟ್ಟಿದ್ದಾರೆ. ನಮ್ಮ ಸಂಸ್ಥಾನದ ವ್ಯಾಪಾರಿಗಳು ಇವರ ಮೇಲ್ಪಂಗ್ತಿಯನ್ನನುಸರಿಸುವರೇನು.

ಗ್ರೀಕರ ಸೈನ್ಯದಲ್ಲಿ ೨೦ ಸಾವಿರ ಜನರು ಯುದ್ಧದಲ್ಲಿ ಸತ್ತಿರುವರೆಂದು ಅವರೇ ಬರೆದಿರುವರು

ಮಾಪಿಳ್ಳಾ ಜನರು ಬಲಾತ್ಕಾರದಿಂದ ಹಿಂದುಗಳನ್ನು ತಮ್ಮ ಮತಕ್ಕೆ ಸೇರಿಸಿದರಷ್ಟೆ. ಇವರನ್ನು ಪುನಃ ಹಿಂದೂಮತಕ್ಕೆ ತೆಗೆದುಕೊಳ್ಳುವುದಾಗಿ ಬೆಂಗಳೂರು ಆರ್ಯಸಮಾಜದವರು ನುಲೆಬಾರಿನ ಕಲೆಕ್ಟರವರಿಗೆ ತಂತೀ ವರ್ತಮಾನವನ್ನು ಕಳುಹಿಸಿರುತ್ತಾರೆ.

ತಾ|| 30 ನೇ ಸಾಯಂಕಾಲ ಸದ್ವಿದ್ಯಾ ಪಾಠಶಾಲೆಯ ಕಂವೌಂಡಿನಲ್ಲಿ ಮಹಾತ್ಮಾಗಾಂಧಿಯವರ 53 ನೇ ವರ್ಧಂತ್ಯುತ್ಸವವು ಮೈಸೂರು ಕಾಂಗ್ರೆಸ್ ಕಮಿಟಿಯವರಿಂದಲೂ ತಿಲಕರಾಷ್ಟ್ರೀಯ ಸಂಘದವರಿಂದಲೂ ಶಕ್ತ್ಯಾನುಸಾರ ನಡೆಸಲ್ಪಟ್ಟಿತು.

ನಮ್ಮ ಸಂಸ್ಥಾನದಲ್ಲಿ ಜನ್ಮವೆತ್ತಿ, ನಮ್ಮ ರಾಜ್ಯದ ದಿವಾಣ ಪದವಿಯನ್ನು ಕೈಗೊಂಡವರಲ್ಲಿ ಅಗ್ರಗಣ್ಯರೆಂದು ಪ್ರಸಿದ್ಧಿಹೊಂದಿದ ಪ್ರಪಂಚದಲ್ಲೆಲ್ಲಾ ಕೀರ್ತಿಹೊಂದಿದ ಆಷ್ಟೇ ಅಲ್ಲದೆ ನಮ್ಮೀ ಭರತಖಂಡಕ್ಕೆ ಒಂದು ಗತ್ಯಪ್ರಾಯರಾದ ಶ್ರೀಯುತ ಸರ್. ಎಂ. ವಿಶ್ವೇಶ್ವರಯ್ಯನವರ 61 ನೆಯ ವರ್ಧಂತ್ಯುತ್ಸವವು ರಾಜಧಾನಿಯ ರತ್ನಾವಳೀ ನಾಟಕಮಂದಿರದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು.

ಬೆಳಗಾಮಿನಲ್ಲಿ ಸಾರಾಯಿ ಅಂಗಡಿಗಳಿಗೆ ಪೋಗುವುದನ್ನು ನಿಲ್ಲಿಸುವುದಕ್ಕೆ ನಿಂತುಕೊಂಡಿದ್ದ ಕುಲಕರ್ಣಿ ಎಂಬುವರಿಗೆ ಕೆಲ ನೀಚ ಜನರು ಈ ಜನಗಳನ್ನು ಅಂಗಡಿಯೊಳಕ್ಕೆ ಎಳೆದುಕೊಂಡುಹೋಗಿ ಹೊಡೆದರೆಂದು ತಿಳಿಯಬಂದಿದೆ.

ತಾ|| 28 ನೇ ಸಾಯಂಕಾಲ ಸುಮಾರು 7|| ಗಂಟೆ ಸಮಯದಲ್ಲಿ ಮಾರ್ಕೆಟ್ ಚೌಕದಬಳಿ ಇಬ್ಬರು ಮದ್ಯಪಾನಮಾಡಿ ಜಗಳವಾಡುತ್ತಿದ್ದು ಕೊಸೆಗೆ ಹೊಡೆದಾಡುವುದಕ್ಕೆ ಪ್ರಾರಂಭಿಸಿದರು. ಆಗ ಇಬ್ಬರು ಪೋಲೀಸಿನವರು ಬಂದು ಆ ಇಬ್ಬರನ್ನೂ ತಳ್ಳಿ ಎಳೆದುಕೊಂಡು ಹೋದರು, ಮದ್ಯಪಾನ ಮಾಡುವವರು ಈ ಉದಾಹರಣೆಯನ್ನು ಮನಸ್ಸಿನಲ್ಲಿಟ್ಟು ಇನ್ನಾದರೂ ಕುಡಿಯುವುದನ್ನು ನಿಲ್ಲಿಸುವರೇನು.

ಜರ್ಮನಿಯಲ್ಲಿ ಒಪ್ಪಾ ಎಂಬಲ್ಲಿಯ ಬಣ್ಣದ ಕಾರ್ಖಾನೆಯಲ್ಲಿ ಸ್ಫುಟವಾಗಿ ೧೦೦೦ ಜನರು ಒಂದೇ ಸಲ ಸತ್ತರು. ೧೩ ಮೈಲಿ ದೂರದವರೆಗೂ ಈ ಸ್ಫುಟಣ ಗಲಾಟೆ ಇತ್ತಂತೆ. ಒಪ್ಪಾ ಊರು ಸುಟ್ಟು ಬೂದಿಯಾಯಿತು.

ವೇಲ್ಸ್ ಯುವರಾಜರ ಸ್ವಾಗತ ಸಮಾರಂಭಕ್ಕೆ ಹಿಂದೂಸ್ಥಾನದ ಸರಕಾರದವರು ೨೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡುವರಾಗಿದ್ದಾರೆ.

ಮಾಪಿಳ್ಳೆಯವರು ವಿಲ್ಲಾಯಿಲ್ ಅಂಶದಲ್ಲಿ ನಂಬೂದ್ರಿಯರ ಮತ್ತು ಇತರ ಹಿಂದುಗಳ ಮನೆಗಳನ್ನು ಸುಟ್ಟು ಮಾಡಿದ್ದಲ್ಲದೆ ಅಲ್ಲಿರುವ ದೇವಸ್ಥಾನಗಳನ್ನು ಸುಟ್ಟು ಪೂಡಿ ಹಸು ಎತ್ತು ಮುಂತಾದುವುಗಳನ್ನು ಕೊಂದು ಆಫೀಸುಗಳಿಗೆ ನುಗ್ಗಿ ರಿಕಾರ್ಡುಗಳನ್ನು ಸುಟ್ಟುಹಾಕುತ್ತಿದ್ದರಿಂದ ಊರು ಬಿಟ್ಟು ಪುರನಿವಾಸಿಗಳೆಲ್ಲರೂ ಓಡಿದಿದ್ದಾರೆಂದು ತಿಳಿಯಬಂದಿದೆ.

ನ್ಯಾಷನಲ್ ಸ್ಕೂಲುಗಳೂ ಮತ್ತು ಬ್ರಾಹ್ಮಣ ವಿದ್ಯಾ ಸಹಾಯಸಂಘವೂ.

———

No. 2.

ಈಗ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಲ್ಲನೇಕರು ತಾವು ಓದುತ್ತಿರುವ ತರಗತಿಗಳ ಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಹೊಂದುವುದಕ್ಕೆ ಎಷ್ಟು ಓದಬೇಕೋ ಅಷ್ಟನ್ನು ಮಾತ್ರ ಕಲಿಯತಕ್ಕವರಾಗಿರುತ್ತಾರೆ. ವಿದ್ಯಾಜ್ಞಾನವನ್ನು ಸಂಪಾದಿಸುವುದಕ್ಕೋಸ್ಕರ ಓದತಕ್ಕವರು ಶೇಕಡಾ 10 ಅಥವಾ 15 ಜನಗಳು ಸಿಕ್ಕಿದರೆ ಅದೇ ಹೆಚ್ಚು.

ಹೈಸ್ಕೂಲ್ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಮತ್ತು ಸ್ವಭಾಷೆಯ ಜೊತೆಗೆ ಜರೂರಿ ಆಥವಾ ಗಣಿತ ಭವತಿಕಶಾಸ್ತ್ರ ಮತ್ತು ರಸಾಯನಶಾಸ್ತ್ರ ಮುಂತಾದುವುಗಳನ್ನು ಓದಬೇಕೆಂದು ನಿರ್ಬಂಧವಿರುತ್ತದೆ. ಈ ಶಾಸ್ತ್ರಗಳು ಜೀವನೋಪಾಯವನ್ನು ಸಂಪಾದಿಸಿಕೊಳ್ಳುವುದಕ್ಕೆ ಓದತಕ್ಕ ವಿದ್ಯಾರ್ಥಿಗಳಿಗೆ ಎಷ್ಟುಮಾತ್ರವು ವಿಶೇಷ ಪ್ರಯೋಜನಕಾರಿಯಾಗಿರುವುದಲ್ಲ. ಒಂದುವೇಳೆ ಈ ಶಾಸ್ತ್ರಗಳನ್ನೆಲ್ಲಾ ಓದಿ ವಿಶ್ವವಿದ್ಯಾನಿಲಯದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ್ದಾಗ್ಯೂ ಸರ್ಕಾರೀ ನೌಕರಿಗೇನೇ ಸೇರಬೇಕಾಗಿರುತ್ತೆ.

ಈ ಜರೂರಿ ಆಥವಾ ಗಣಿತ ಭವತಿಕಶಾಸ್ತ್ರ ಮತ್ತು ರಸಾಯನಶಾಸ್ತ್ರಗಳಿಗೆ ಬದಲಾಗಿ ಸ್ವತಃ ಜೀವನವನ್ನು ಸಂಪಾದಿಸಿಕೊಳ್ಳತಕ್ಕ ಮತ್ತು ದೇಶದ ಸಂಪದಭಿವೃದ್ಧಿಗೂ ಸಾಧಕವಾದಂಥ ಕೈಗಾರಿಕೆಗಳನ್ನು ಪ್ರತಿಯೊಂದು ಹೈಸ್ಕೂಲ್‌ಗಳಲ್ಲಿಯೂ ಬೋಧಿಸುವುದಕ್ಕೆ ಏರ್ಪಾಡುಮಾಡಬೇಕು. ಸಂಸ್ಥಾನಕ್ಕೆಲ್ಲಾ ಒಂದೆರಡು ಇಂಡಿಸ್ಟ್ರಿಯಲ್ ಸ್ಕೂಲುಗಳಿದ್ದರೆ ಮಾತ್ರಕ್ಕೆ ಬಹಳ ಜನ ವಿದ್ಯಾರ್ಥಿಗಳಿಗೆ ವಿಶೇಷಪ್ರಯೋಜನವಾಗಿರುವುದಿಲ್ಲ. ಆದುದರಿಂದ ಪ್ರತಿಯೊಂದು ಸೆಕೆಂಡರಿ ಸ್ಕೂಲುಗಳಲ್ಲೂ ಕೈಗಾರಿಕೆಗಳನ್ನು ಹೇಳಿಕೊಡುವುದಕ್ಕೆ ಸರ್ಕಾರದವರು ಏರ್ಪಾಡುಮಾಡಬೇಕು.

ಸತೀಷ.

ಪತ್ರಸಂವಾದ.

ಚಿಕ್ಕದಾಗಿರುವಾಗಲೆ ಖಂಡಿಸಬೇಕು!

—:o:—

ವರ್ತಮಾನ ಪತ್ರಿಕೆಗಳು, ದೇಶದಲ್ಲಿರುವ ದುಷ್ಟ ನಡತೆ ದುರ್ವ್ಯವಹಾರವನ್ನು ಖಂಡಿಸಿ, ನ್ಯಾಯವನ್ನೂ ಪ್ರಜಾಕರ್ತವ್ಯವನ್ನೂ ಜನರಿಗೆ ತಿಳಿಸಬೇಕಾದುದು ಧರ್ಮ. ಆದರೆ ನಮ್ಮ ದೇಶದ ಕೆಲವು ವರ್ತಮಾನ ಪತ್ರಿಕೆಗಳು ತಾವು ಪ್ರಜಾಕೋಟಿಯ ಕ್ಷೇಮಕ್ಕಾಗಿ ಕೆಲಸ ಮಾಡುತ್ತೇವೆಂದು ಅಂದುಕೊಳ್ಳುತ್ತಾ, ತಿಳಿಯದ ಜನರನ್ನೂ ತಮ್ಮ ಲೇಖನಗಳ ಸಹಾಯದಿಂದ ಮೋಸಗೊಳಿಸಿ ತಮ್ಮ ದುಷ್ಟವಾದ ಸ್ವಾರ್ಥತೆಯಿಂದ ಕೆಲಸ ಮಾಡುತ್ತಿರುವವು. ಈ ಪತ್ರಿಕೆಗಳು ನಿಜವಾಗಿಯೂ ದೇಶದ ಜನರ ಹಿತವನ್ನು ಕೊರತಕ್ಕವುಗಳೇ ಇಲ್ಲವೇ ಎಂಬುದನ್ನು ವಾಚಕರು ಊಹಿಸಿಕೊಳ್ಳುವುದಕ್ಕಾಗಿ ಒಂದು ಉದಾಹರಣೆಯನ್ನು ಕೊಡುವೆವು.

ಮಿಲ್ಲರ್ ವರದಿಯು ಬಂದಂದಿನಿಂದ 'ಮೈಸೂರು ಸ್ಟಾರ್' ಪತ್ರಿಕೆಯು ಬ್ರಾಹ್ಮಣ ವಿಚಾರವಾಗಿ ಬರೆಯುತ್ತಿರುವ ಲೇಖನಗಳನ್ನು ಅನೇಕರು ಸೋಡಿರಬಹುದು. ಇದರಲ್ಲಿ ಶ್ರೀಮನ್ಮಹಾರಾಜರವರ ಸರಕಾರದ ಚಾಕರಿಯಲ್ಲಿರುವ ಬ್ರಾಹ್ಮಣರನ್ನು ಬಹಳವಾಗಿ ನಿಂದ್ಯವಾದ ಮಾತುಗಳಿಂದ ಆಕ್ಷೇಪಿಸಿ ಬರೆಯುತ್ತಿದ್ದುದಲ್ಲದೆ, ಬ್ರಾಹ್ಮಣ ಅಧಿಕಾರಿಗಳು ಬ್ರಾಹ್ಮಣೇತರರಿಗೆ ದ್ರೋಹ ಮಾಡಿದರೆಂಬ ಅಭಿಪ್ರಾಯವು ಬರುವಂತೆ ಬರೆಯಲ್ಪಟ್ಟಿದೆ. ಹೀಗೆ ಬರೆದುದರಿಂದ ಯಾರಿಗೆ ಕೆಟ್ಟಹೆಸರು ಬರುವಂತೆ ಮಾಡಿದರು? ಅಯ್ಯೋ! ಪಾಪ! ಅವರಿಗೆ ಬ್ರಹ್ಮದ್ವೇಷದಲ್ಲಿರುವ ಆಸಕ್ತಿಯು ಎಲ್ಲವನ್ನೂ ಮರೆತು ಬಿಡುವಂತೆ ಮಾಡಿತು. ಬ್ರಾಹ್ಮಣರಿಗೆ ಬೈದ ದುಷ್ಟಮಾತುಗಳು ಅವರಿಗೆ ಅನ್ವಯಿಸದೆ ಬ್ರಾಹ್ಮಣರನ್ನು ಚಾಕರಿಗೆ ತೆಗೆದುಕೊಂಡವರಿಗೆ ಅನ್ವಯಿಸುವಂತೆ ಆಯಿತು ಈ ಪತ್ರಿಕೆಗಳ ಪುಣ್ಯಬಲದಿಂದ ಸರ್ವಾಧಿಕಾರವನ್ನು ಧರಿಸಿದವನು ಕೂಡ ಸುಮ್ಮನೆ ವಿಚಾರವಿಲ್ಲದೆ ಕುಳಿತಿರುವನು ಅದು ಹೇಗಾದರೂ ಇರಲಿ.

ಭಾರತೀಯ ವಿದ್ಯಾರ್ಥಿಗಳಿಗೆ ತಮ್ಮ ದೇಶಬಾಂಧವರಲ್ಲಿರುವ ಪ್ರೀತಿಯು ಅಪರಿಮಿತವಾದುದು ಹೇಳಬೇಕಾಗಿಲ್ಲ. ಅವರ ವಿದ್ಯಾಪ್ರಭಾವದಿಂದ ದೇಶಾಭಿಮಾನಿಗಳಲ್ಲಿರುವ ಸದ್ಗುಣಗಳನ್ನು ತಿಳಿಯಬಲ್ಲರು. ಇದನ್ನು ಆಜ್ಞರೂ, ಪ್ರಪಂಚದ ಪರಿಜ್ಞಾನವಿಲ್ಲದವರೂ ಏನು ಬಲ್ಲರು? ಲೋಕಮಾನ್ಯರು ದೇಶಸೇವಾನಿರತರಾಗಿದ್ದವರಲ್ಲಿ ಅಗ್ರಗಣ್ಯರಾಗಿದ್ದುದರಿಂದ ಅವರ ಪುಣ್ಯದಿನವನ್ನಾಚರಿಸುವುದಕ್ಕೆ ರಾಜಧಾನಿಯ ವಿದ್ಯಾರ್ಥಿಗಳು ಏರ್ಪಾಡಿಸಿದರಷ್ಟೆ. ಪೋಲಿಸಿನವರು ಭಜನಾ ಪಾರ್ಟಿಯನ್ನು ನಿಲ್ಲಿಸಲಾಗಿ ಗಲಾಟೆಯಾಯಿತು ವಿದ್ಯಾರ್ಥಿಗಳನ್ನು ಹಿಡಿದು ಜೈಲಿಗೆ ಹಾಕುವರೆಂಬ ಸುದ್ದಿಯು ಹಬ್ಬಿದ್ದರಿಂದ ನ್ಯಾಯಾನ್ಯಾಯಗಳನ್ನು ಕಂಡುಹಿಡಿಯುವುದಕ್ಕೆ ಒಂದು ರಾಷ್ಟ್ರೀಯ ಕಮಿಟಿಯು ಏರ್ಪಾಡಿಸಲ್ಪಟ್ಟಿತು. ಲೋಕಕ್ಕೆ ನ್ಯಾಯವನ್ನು ತೋರಿಸುವುದಕ್ಕಾಗಿಯೇ ರಾಷ್ಟ್ರೀಯ ಕಮಿಟಿಯು ಏರ್ಪಟ್ಟಂತಾಗಲಿಲ್ಲವೇ? ಇದರ ವಿಚಾರವನ್ನು ಸ್ವಲ್ಪವೂ ತಿಳಿಯದೆ 'ಸ್ಟಾರ್' ಪತ್ರಿಕೆಯಲ್ಲಿ ರಾಜದ್ರೋಹಕರವಾದ ಸಭೆಯೆಂದು ಈ ಕಮಿಟಿಯನ್ನು ಕರೆಯಲುಪಕ್ರಮಿಸಿರುವುದು ಅದಲ್ಲದೆ ಅಸಹಕಾರದ ತತ್ವವನ್ನು ಈ ಸಭೆಯು ಪ್ರಚಾರಕ್ಕೆ ತರುತ್ತಿರುವುದೆಂದು ಅಭಿಪ್ರಾಯ ಬರುವಂತೆ ಬರೆಯುತ್ತಿರುವುದು. ಈ ರೀತಿ ಬರೆಯಲು ಮೌಢ್ಯವೇ ಕಾರಣವಲ್ಲದೆ ಬೇರೆಯಲ್ಲ. ಅಸಹಕಾರವನ್ನು ಅನುಸರಿಸುವವರಾರು? ಅಸಹಕಾರವು ಯಾರೊಡನೆ? ಅಸಹಕಾರಕ್ಕೆ ಕಾರಣವೇನಿರುವುದು. ಇವೆಲ್ಲಾ ಲೇಖಕರ ಹೃದಯದಲ್ಲಿರುವುದೋ ಇಲ್ಲವೋ ಓಹೋ ಇವರ ಉದ್ದೇಶವು ಗೊತ್ತಾಯಿತು! ಇಲ್ಲಿಯೂ ಬ್ರಹ್ಮದ್ವೇಷವೇ? ಆದರೆ ಬ್ರಹ್ಮದ್ವೇಷಮಾಡಬೇಕಾದರೆ ಸುಳ್ಳು ಬರೆಯಲೇಬೇಕೆ? ಬ್ರಾಹ್ಮಣರು ಅಸಹಕಾರ ಮಾಡುವರೆಂಬದಾಗಿಯೂ, ಮಾಡಿದರೆಂಬದಾಗಿಯೂ ಈ ಪತ್ರಿಕೆಯಲ್ಲಿ ಅನೇಕವೇಳೆ ಬರೆಯಲ್ಪಟ್ಟಿದೆ. ಇಲ್ಲಿಯೂ ಕಪಟವೇ? ಬ್ರಾಹ್ಮಣರು ಮತಾಡದಂತೆ ಮಾಡಿದವರಾರು ಈ ಪ್ರಶ್ನೆಗೆ ಇದಕ್ಕೆ ಕಾರಣ ಭೂತವಾದವರು ಉತ್ತರಕೊಡಲಿ. ಬ್ರಾಹ್ಮಣವಿದ್ಯಾಸಹಾಯ ಸಂಘವು ಅಸಹಕಾರಕ್ಕೆ ಸಂಬಂಧಪಟ್ಟದೆಂದು ಈ ಪತ್ರಿಕೆಯು ಅಭಿಪ್ರಾಯ ಪಡಬಹುದು. ಬ್ರಾಹ್ಮಣ ವಿದ್ಯಾಸಹಾಸಂಘದವರು ಬೇರೆ ಶಾಲೆಗಳನ್ನು ಮಾಡುತ್ತಲಿಲ್ಲ; ಈಗಿನ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ವೇತನ ಕೊಡುವುದೇ ಈ ಸಂಘದವರ ಅಭಿಪ್ರಾಯವೆಂದು ಕಂಡುಬರುತ್ತೆ. ಇನ್ನು ಅಸಹಕಾರವಾದರೆ ಒಂದು ವರ್ಣದವರು ತಮ್ಮ ಜನರ ಸಹಾಯಕ್ಕೆ ಮಾಡುವ ಸ್ವಸ್ಥ ಕೆಲಸಗಳೂ ಅಸಹಕಾರಕ್ಕೆ ಸಂಬಂಧಪಟ್ಟವುಗಳೇ? ಆಹಾ! ಈ ಪತ್ರಿಕೆಗೆ ಅಸಹಕಾರ ವಿಷಯದಲ್ಲಿರತಕ್ಕ ಅಭಿಪ್ರಾಯವೇ! ಪ್ರಪಂಚದಲ್ಲಿರತಕ್ಕವರೆಲ್ಲರೂ ಈ ಅಭಿಪ್ರಾಯವನ್ನು ಕಲಿಯಲಿ!

ಕಾಂಗ್ರೆಸ್ ಕಮಿಟಿಯವರು ಮಾಡುತ್ತಿರುವ ಪ್ರಜಾಸೇವೆಯನ್ನು ಮಾತ್ರ ತಿಳಿಯತಕ್ಕವರೇ ಇಲ್ಲ. ಏತಕ್ಕೆ ತಿಳಿಯಬೇಕು. ಎಲ್ಲರನ್ನು ದೂಷಿಸತಕ್ಕವರಿಗೆ ನಿಜಾಂಶ ತಿಳಿಯತಕ್ಕ ಅವಶ್ಯಕತೆಯೇನು? ಹೀಗೆ ತಿಳಿಯುವುದು ಶುದ್ಧ ತಪ್ಪು. ಈ ಸಭೆಯವರು ನೂಲುವ ರಾಟೆಯನ್ನು (ಚರಕ) ಬಡಜನರಿಗೆ ಒದಗಿಸಿ ಅವರಿಗೆ ಕೆಲಸವನ್ನು ಕಲ್ಪಿಸಿ ದಾಸವೃತ್ತಿಯಿಲ್ಲದೆ ಸ್ವಂತವಾಗಿ ಜೀವನ ಮಾಡುವುದಕ್ಕೆ ಸಹಾಯಮಾಡುವರು. ಇದು ದೇಶಕ್ಕೆ ಹಿತವಲ್ಲವೋ ವಾಚಕರೇ ತಿಳಿದುಕೊಳ್ಳಲಿ. ನಮ್ಮ ದೇಶದಲ್ಲಿ ಎಷ್ಟು ಜನರು ಕೆಲಸವಿಲ್ಲದೆ ಅನ್ನಕ್ಕೆ ಮಾರ್ಗವಿಲ್ಲದೆ ಅಲೆಯುತ್ತಿರುವರು! ಇಂತಹ ಜನರಿಗೆ ಜೀವನೋಪಾಯವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಸಂತೋಷಪಡದೆ ಇದು ರಾಜದ್ರೋಹಕರವೆಂದು ಹೇಳುವುದು ನ್ಯಾಯವೇ? ಹೀಗೆ ಸಾರುತ್ತಿರುವರು. ಪ್ರಜಾಕ್ಷೇಮವಿಚಾರಗಳಂತೆ ಇಂಥಾ ಪ್ರಜಾಮಿತ್ರರು ಸಾವಿರಾರುಮಂದಿ ಬೇಕು ಆಗ ದೇಶದಲ್ಲಿ ಯಾರೂ ಇರುವುದಿಲ್ಲ ಈ ಸಭೆಯವರು ಮದ್ಯಪಾನದಿಂದುಂಟಾಗುವ ಕೆಡಕನ್ನು ಸಹ ತಿಳಿಸುವರು. ಮತಧರ್ಮಕ್ಕನುಸಾರವಾಗಿ ಎಲ್ಲರೂ ಈ ದುಷ್ಪಾನವನ್ನು ಬಿಡಬೇಕು. ಈ ರೀತಿ ಬೋಧಿಸುವುದು ತಪ್ಪೆ? ಪಾನದಿಂದ ಅನೇಕರು ಬಹಳ ಹೀನಸ್ಥಿತಿಗೆ ಬಂದಿರುವರು. ಹೀಗಿರುವಲ್ಲಿ ಇದನ್ನು ತಿಳಿದವರೂ ನಿಜವಾಗಿಯೂ ಪ್ರಜೆಗಳ ಕ್ಷೇಮವನ್ನು ಕೋರತಕ್ಕವರೂ ಕುಡಿತದಿಂದುಂಟಾಗುವ ಕೆಡಕನ್ನು ಜನರಿಗೆ ಬೋಧಿಸಲೇಬೇಕು. ಇದಕ್ಕೆ ಪ್ರತಿಬಟಿಸುವವನು ದೇಶದಶತ್ರು ಇದರಲ್ಲಿ ಸಂಶಯವಿಲ್ಲ.

ಇಷ್ಟು ಮಾತ್ರವಲ್ಲದೆ ಹದಿನೆಂಟನೆಯ ತಾರೀಖಿನ ಸ್ಟಾರ್ ಪತ್ರಿಕೆಯಲ್ಲಿ ಮೇಲೆ ಹೇಳಿದ ವಿಷಯಗಳಲ್ಲದೆ ಬೇರೆ ಕೆಲವು ವಿಷಯಗಳು ಬರೆಯಲ್ಪಟ್ಟಿರುವುವು ಮ|| ಮುಹಮ್ಮದ್ ಸೇಟ್ ರವರಿಗೆ ಬರೆದ ಲೇಖನದ ವಿಚಾರ ಬಹಳವಾಗಿ ಬರೆಯಲ್ಪಟ್ಟಿರುವುದು. ಮ|| ಸೇಟ್ ರವರ ರಾಜಭಕ್ತಿ ಬಹಳವಾಗಿ ಕೊಂಡಾಡಲ್ಪಟ್ಟಿರುವುದು ಮ|| ಸೇಟ್‌ರವರು ನಿಜವಾಗಿಯೂ ಪ್ರಜಾಪಕ್ಷಪಾತಿಗಳೆಂದೂ ಜನರ ಕ್ಷೇಮಕ್ಕೆ ಸಾಧನವಾದ ಕೆಲಸಗಳನ್ನು ಮಾಡುವುದಕ್ಕೆ ಸಮರ್ಥರೆಂದೂ ಮತ್ತು 'ಖಿಲಾಫತ್' ಕಮಿಟಿಗೆ ಇವರು ಸಭಾಸದರೆಂದೂ ತಿಳಿದುದರಿಂದ ಇವರಿಗೆ ಪತ್ರಗಳನ್ನು ಬರೆದರು ಇವರು ಖಿಲಾಫತ್ ಕಮಿಟಿಗೆ ಸಭಾಸದರಾದುದರಿಂದ ಕಾಂಗ್ರೆಸ್ ಕಮಿಟಿಗೆ ಸಹಾ ಮೆಂಬರು ಪ್ರಜಾಸೇವೆ ಮಾಡುವರೆಂದು ತಿಳಿದು ಪತ್ರ ಬರೆದರೇ ಹೊರತು ಬೇರೆಯಲ್ಲಿ ಈ ಸಂಗತಿಗಳನ್ನೆಲ್ಲಾ ತಿಳಿಯದೆ ಈ ಪತ್ರಿಕೆಯಲ್ಲಿ ಒಬ್ಬ ನಿಷ್ ಇಂದಿಬಡ್ ಎಂಬ ಅಭಿಧಾನದಿಂದ ಒಂದು ಲೇಖನವನ್ನು ಬರೆದಿದ್ದರು. ಈ ಸಭೆಯು ಮಾಡುತ್ತಿರುವ ಕೆಲಸಗಳು ಪ್ರಜಾಕ್ಷೇಮಕ್ಕೆ ಎಂದು ಎಲ್ಲರೂ ತಿಳಿಯುವಂತಾಯಿತು. ಈ ಪ್ರತಿಯೊಬ್ಬ ಪ್ರಜೆಯೂ 'ಸ್ಟಾರ್' ಪತ್ರಿಕೆಯಲ್ಲಿ ಬರೆದಿರುವ ಲೇಖನವನ್ನು ಖಂಡಿಸಿ ಇನ್ನು ಮುಂದೆ ಇಂಥಾ ಲೇಖನಗಳಿಗೆ ಗಮನಕೊಡದೆ ಇರಲೆಂದು ಕೋರಿಕೆ.

ಮೈಸೂರು ಸ್ತ್ರೀಯರಿಗೂ ಮತ್ತು ವಿದ್ಯಾರ್ಥಿನಿಯರಿಗೂ ವಿಜ್ಞಾಪನೆಗಳು

—— ——

ಭಗಿನಿಯರುಗಳಿರಾ ಪೂರ್ವರಿಂದಲು ಈ ಪುರುಷರುಗಳೇ ಸೇರಿಕ್ಕೊಂಡು ಶಾಸ್ತ್ರಗಳೆಂಬ ತಮ್ಮಗಳನ್ನು ಮಾಡಿ ನಿಮ್ಮಗಳನ್ನು ಗುಲಾಮರನ್ನಾಗಿ ಮಾಡಿ ನೀವುಗಳು ನಿಮ್ಮಗಳಿಗೆ ಸಹ ಸುದವದಂತ್ತಿರುವ ವ್ರಾಣ ಜ್ಞಾನ ಶಕ್ತಿ ಕಾಮ ಸುಖದುಃಖ ಸಹಾ ಹಾಳುಮಾಡಿಕ್ಕೊಂಡು ಪುರುಷರ ಆಧೀನದಲ್ಲಿ ಶಿಕ್ಕರುವ ಜೀವಪ್ರ ನಿಮ್ಮ ಹಕ್ಕು ಬಾಧ್ಯತೆಗಳನ್ನು ಕಳಿದುಕ್ಕೊಂಡು ಈ ಕಲಿಯುಗದಲ್ಲಿ ಸಂತಟ ಪಡುತ್ತಿರುವದು ಸರ್ವರಿಗೂ ತಿಳಿದ ಸಂಗತಿಯೇ ಆಗಿದೆ. ತತ್ರಾಪಿ ಬ್ರಾಹ್ಮಣ ಸ್ತ್ರೀಯರಿಗಂತೂ ಈ ಕಟ್ಟು ಕಟ್ಟಲೆಯಿಂದ ಉಂಟಾಗಿರವ ಅಪಾರವಾದ ಸಂತಾಪವು ಹೇಳಲಳವಲ್ಲ.

ಈ ತತಮಾನದಲ್ಲಿ ಪಶ್ಚಿಮ ದೇಶಗಳಲ್ಲದೆ ಈ ನಮ್ಮ ಹಿಂದೂ ದೇಶದಲ್ಲಿಯು ಅಂದರೆ ಕಲ್ಕತ್ತಾ ಬೊಂಬಾಯಿ ಮದರಾಸು ಪ್ರಾಂತದಲ್ಲಿಯೂ ಉತ್ತರ ಭೀಮೆಯಲ್ಲಿಯೂ ಸ್ತ್ರೀಯರೆಲ್ಲರೂ ತಮ್ಮ ಹಕ್ಕು ಭಾಧ್ಯತೆಗೆ ಮತ್ತು ರಾಜಕಾರ್ಯ ಪ್ರಜಾಪಾಲನಕ್ಕೆ ಪುರುಷರಿಗೆಯಾವ ಸ್ವಾತಂತ್ರವುಂಟೊ ತದ್ವತ್ ಸ್ತ್ರೀಯರಿಗೂ ಇರುವುದರಿಂದ ಅವುಗಳಲ್ಲಿ ತಮ್ಮಗಳನ್ನು ಸೇರಿಸಿಕೊಂಡು ಸ್ವಾತಂತ್ರ್ಯವನ್ನು ಕೊಡಬೇಕೆಂದು ಸ್ತ್ರೀಯರು ಹೊಡೆದಾಡುತ್ತಿರುವಾಗ್ಗೆ ಕಳೆದತಿಂಗಳು 26 ನೇ ತಾರೀಕಿನಲ್ಲಿ ಸದ್ವಿದ್ಯಾ ಪಾಠಶಾಲೆಯಲ್ಲಿ ನಡೆದ ಬ್ರಾಹ್ಮಣ ಸಭಾದಲ್ಲಿ ಸ್ತ್ರೀಯರು ಇರಕೂಡದೂ, ಶೀರಕೂಡದೆಂದೂಬಹು ಕಠಿಣವಾದ ನಿರ್ಣಯವನ್ನು ಕೆಲವು ಪುರವರ್ಯರೇ ಶೇರಿಕೊಂಡು ನಿಮ್ಮಗಳ ಹಿತಚಿಂತಯೇ ಇಲ್ಲದೆ ನಿಮ್ಮನ್ನು ದೂರುಮಾಡುವುದರ ಮೂಲ್ಕ ನಿಮ್ಮ ಸ್ವಾತಂತ್ರಕ್ಕೆ ಹೆಚ್ಚು ಭಂಗವನ್ನು ಕಲ್ಪಿಸುವುದಾಗಿ ತೋರುತ್ತೆ. ಆದ್ದರಿಂದ ಪೂರ್ವದ ಬಂದಿ ತನವನ್ನು ಬಿಡಿಸಿಕೊಂಡು ಸ್ವತಂತ್ರವಾಗಿರಬೇಕೆಂಬ ಬ್ರಾಹ್ಮಣ ಸ್ತ್ರೀಯರೇ ಈ ಸಮಯವನ್ನು ನೀವು ಬಿಡತಕ್ಕದಲ್ಲ. ಬಿಟ್ಟರೆ ಎಂದಿಗೂ ಬರತಕ್ಕದಲ್ಲ. ಬಂದರೂ ಅಷ್ಟು ಪ್ರಯೋಜನವಿಲ್ಲವಾಗಿ ಈ ಕೂಡ್ಲೆ ಎಚ್ಚತ್ತು ನೀವುಗಳು ಬ್ರಾಹ್ಮಣ ಪುರುಷ ಸಭಾಕ್ಕೆ, ಅವರು ಪ್ರಜೆಗಳಿಗೆ ಹಿತಕರವಾಗಿಯೂ ತಮ್ಮಗಳ ಏಳಿಗೆಗೂ ಮಾಡುವ ಏರ್ಪಾಡುಗಳೂ ಕಾರ್ಯಗಳಲ್ಲಿ ನಿಮ್ಮನ್ನು ಇತರ ಪಶ್ಚಿಮದೇಶದ ಇತರ ಸ್ತ್ರೀಯರಂತೆ ಸೇರಿಕೊಂಡು ನಿಮ್ಮಗಳ ಅಭಿಪ್ರಾಯವನ್ನು ತೆಗೆದುಕೊಂಡು ನಿಮ್ಮ ಬಂಧವಿಮೋಚನೆಗೆ ತಕ್ಕ ಸಲಹೆಯನ್ನು ಕೊಟ್ಟುಕೊಂಡು ನ್ಯಾಯವಾಗಿ ಹೊಡದಾಡಲು ಅವಕಾಶವನ್ನು ಹೊಂದಲು ಜಾಗ್ರತೆಯಾಗಿ ಪ್ರಯತ್ನಮಾಡುವುದು ಯುಕ್ತವಲ್ಲವೇ?

ಹಿತಚಿಂತಕ.

"ನವರಾತ್ರೆ"

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಕುರುಬರ ರಾಚ್ಚೈಯ್ಯ ಜವರಪ್ಪ ಬೋರಯ್ಯ ಅತ್ತಿಗುಪ್ಪೆ ಚಿಕ್ಕ ಸಿದ್ದೇಗೌಡರು || ಬರುವರು ಮಂಡ್ಯಾ ಹುಳವಳ್ಳಿಯಿಂದ ಮಾರಣ್ಣ ಬೀರಯ್ಯ ನವರಾತ್ರೆಗೆ ||೧೧||

ತುಂಕೂರು ಬೋಗಯ್ಯ ಬೂಧಾಳು ಸಂಗಪ್ಪ ಹೊಸದುರ್ಗ ಲಿಂಗಣ್ಣ ಬರುವರಂತೆ || ರಾಮಣ್ಣ ಬೀರೂರು ಸಂಜೀವನಾಗಮ್ಮ ಶಿವಮೊಗ್ಗೆ ಸಂಗಣ್ಣ ಚೆನ್ನಪ್ಪನು ||೧೨||

ಬಾರಾ ಹಜಾಮರಂಗ ಬತ್ತಾನೆ ಕೊಣೆಯನು ಅಗಸರ ಪುಟ್ಟಹನೂರಿಂದ || ಕೆರಾಪುರದ ಕೆಲಸಿತಮ್ಮಾನು ಬತ್ತಾನೆ ಕುಂಬಾರ ನಂಜಯ್ಯ ಗೋಎಂದನು ||೧೩||

ಮೈಸೂರುಪಟ್ಟಣದೊಳಗೆಲ್ಲಾಯಿರುವ ಹಾರ್ವರ್ ವೊದಲೆಲ್ಲಿಂಗು ಜಾತಿಗಳಿಗೆ || ದೇಶವೇಶವು ನೆಂಟರಿಷ್ಟರು ಬರುವರು ಮಹನರ್ವಿಜಾತ್ರೆ ನೋಡುವುದ ಕಾಯ್ಲೋ ||೧೪||

ಆಕಾಶವೀವಾನ ಬಂಕಂತೆ ಅವಾಗ ಅಂತರಿಕ್ಷದಿ ವೋಡಾಡುವುದಂತೆ || ರೀಕಾವೋಕಾ ಪುಕ್ಕ ಹೊಟ್ಟಿ ದೊಡ್ಡಾಹದ್ದು ಹಾರುವತೆರದಿ ಹಾರುವದಂತೆ ||೧೫||

ಜೋಕ್ಲಾ ಜೋಗಪ್ಪ ಹುಡ್ಗರಾ ಮಕ್ಕಳಾನಾ ಕರಕೊಂಡು ಹೋಗ್ತೀ ನವರಾತ್ರೆಯ ಜಾತರಿಗೆ || ಬೇಕ್ಲಾ ಹುಶಾರ್ ನಿನಗೆ ಯನ್ಮುಗಿಂನ್ಯೊಕ್ಕೇನೇಗೆ ಬೀದ್ದೀತು ಯಿಮಾನಗಿಮಾಡವು ||೧೬||

ಮೈಸೂರು ಊರೊಳಗೆ ಹಾದಿಹಾದಿಯೊಳ್ಗೆ ಮೋಟಾರು ಭರ್ರೆಂದು ಒರ್ತೈತೆ || ಬೇಸೆಂದು ನಿಂತಾಗೆ ಸೈಕಲ್ ಮೆಗೆಬಹು ಜನಗಳು ಬತ್ತಾರೆ ಜೋಕ್ಲಾ ಕಾಳಾ ||೧೭||

ಮೋಟಾರು ಸೈಕಲ್ ಸಾರೋಟ್ ಗೀರೋಟ್ ಹರದೀತು ಹುಡ್ಗರಾ ನೋಗೆ || ಕೋಟೀಲಿ ತಮಾಸೆ ನೋಡೋಕೆಹೋದರೆ ಬಾಳೆಪಟ್ಟೆಯು ಏಟು ಬಿದ್ದೀತು ||೧೮||

ಮಳೆಗಿಳೆ ಒಂದರೆ ಜೋಕೆಕಾಯ್ಲೋ ಸಿದ್ದ ಜಗ್ಲೀಗಿಗ್ಲೀ ಇಲ್ಲ್ಲ ಕೋಟಿಯೊಳಗೆ || ಊರೆಲ್ಲಾ ವಸಿ ಏತೆ ಬೈಲೆಲ್ಲಾ ಗಿಡವೈ ಮಳೆಬಿಸಿಲಿಗೆ ಅವಕಾಶವಿಲ್ಲಾ ||೧೯||

ನಾಟಕ ಬೈಸ್ಕೊಪ್ ನೋಟಕ್ಕೆ ಹೋಗ್ತೀಯಾ ಕಳ್ಳರ ಭಯವುಂಟು ಜೋಕೆಕಣಾ || ಕೂಟವು ಸೇರ್ತಯ್ತೆ ಬಲವಾಗಿ ಜನಗಳು ವಳ್ಳೆರು ಕೆಟ್ಟೋರು ಇರುವರಲ್ಲಿ ||೨೦||

ನಾನೊಂದರ್ಚರ್ಕ್ಕೀಗೌನಿ ಇಪ್ಪತ್ತರ್ಸದಕೆಳಗೆ ನಮೊಡಯ ಚಾಮಪ್ಪ ದೌಲತ್ತಿಗೆ || ಬನ್ನೀಮರಕೋಗ್ವಾಗ ದಂಡುದಾಳ್ ಬಿಟ್ಕೊಂಡು ಅನೇಮೇಲ್ಬಂಗಾರ್ಮಂಟಪದೊಳಗೆ ||೨೧||

ಕುಂತ್ಕೊಂಡು ನಮ್ಮೊಡೆಯ ಅತ್ತತ್ತ ನೋಡುತ್ತ ಬರುತಿದ್ದ ದೇವ್ರಂತೆ ಹೊಳೆಯುತ್ತಲೆ || ಅತ್ಕಡೆ ದೂರದಲ್ಲಿ ನಾಟಕದ ದೊಡ್ಮನೆ ತೊಟ್ಟಾಗೆ ನಿಂತು ನೋಡಿದ್ದೆಕಾಯ್ಲಾ ||೨೨||

ಹೌದ್ಲಾಸಿದ್ದಾ ನೀನು ಹೇಳೋದಾ ಸಟೆಯಲ್ಲ ಆಶಾಲ ಈಗೆಲ್ಲಾ ಕಥ್ಲಾಬೇಕು || ಗದ್ಲಾಪ್ಲೆಗಿಪ್ಲೆಂಬು ಕಾಣಬಾರ್ದರೋಗವು ಈಗಲ್ಲಾ ಹರಡಕೊಂಕು ಮೈಸೂರಿಗೆ ||೨೩||

ಶ್ರೀಕೃಷ್ಣಮೂರುತಿ ಲೋಕದೊಡೆಯ ನೀನು ಕಾಣದ್ದು ಇಲ್ಲವು ಜಗದೊಳಗೆ || ಈ ಕೃಷ್ಣರಾಜರ ಕಾಪಾಡಬೇಕೆಂದು ಬೆಬ್ಬೆದರಿ ಚಾಮುಂಡೆಯು ಬೇಡಿಕೊಳ್ವೆ ||೨೪||

ನವಯುಗದ ಅಭಿಪ್ರಾಯ

'ನವಯುಗ' ಪತ್ರಿಕೆಯು ಜನ್ಮನೆತ್ತಿ ಇನ್ನೂ ಬಹಳ ಕಾಲವಾಗಲಿಲ್ಲ. ಆಗಲೇ ನವನಾಗರಿಕತೆಯ ಪ್ರಜನನ್ನು ನೆಡುವುದಕ್ಕೆ ಪ್ರಾರಂಭ. ಬಂಗಾಳ ದೇಶದ ಜನರು ಸ್ತ್ರೀಯರಿಗೆ ಜುನಾವಣಿಯ ಹಕ್ಕನ್ನು ಕೊಡದೆ ಇದ್ದುದರಿಂದ ಅವರು ದೇಶಾಭಿಮಾನಿಗಳಾಗುವುದಕ್ಕೆ ಅನರ್ಹರಂತೆ! ಆಹಹ! ಏನಾಶ್ಚರ್ಯ! ನಮ್ಮ ಪ್ರಜಾಮುಖಂಡರೆಲ್ಲಾ ನಮ್ಮ ಪುರಾತನ ಕಾಲದ ನಡವಳಿಕೆಗಳನ್ನು ಆಚರಿಸಬೇಕೆಂದಿರುವಾಗ ನಮ್ಮ 'ರಾಷ್ಟ್ರೀಯ' ಸಭೆಯ ಪಕ್ಷವಾಗಿ ಮಾತನಾಡುವುಡಕ್ಕುದ್ಯುಕ್ತವಾದ ಪತ್ರಿಕೆಯು ಹೀಗನ್ನುವುದಲ್ಲಾ! ಇದು ಸಾಲದ್ದಕ್ಕೆ ಸರೋಜನಿದೇವಿಯೇ ನೊದಲಾದವರ ಹೆಸರು ಬೇಕೆ ಎಲ್ಲಾಸ್ತ್ರೀಯರೂ ಸರೋಜಿನಿದೇವಿಯರೇ? ಇದನ್ನು ನಮ್ಮ ಬಂಗಾಳಿ ಭಗಿನಿಯರು 'ನವಯುಗದ' ಅಭಿಪ್ರಾಯವನ್ನು ಅನುಮೋದಿಸುವರೇನು? ನಮ್ಮ ಅಭಿಪ್ರಾಯದಲ್ಲಿ ಎಂದೂ ಮಾಡಲಾರರು. ನವಯುಗದ ನವನಾಗರಿಕತೆಯ ಅಭಿಪ್ರಾಯವನ್ನು ನೋಡಿ ಆಶ್ಚರ್ಯ ಪಡಬೇಕಾಗಿದೆ.

ಟ್ರೂತ್ ಪತ್ರಿಕೆಯ ಆತಮು:—

'ಸ್ಟಾರ್' 'ಒಕ್ಕಲಿಗರ' ಪತ್ರಿಕೆಗಳು ಬ್ರಾಹ್ಮಣರನ್ನು ದ್ವೇಷಿಸುವುದರ ಅಸಕ್ತಿಯನ್ನು ತೋರಿಸುವಂತೆ ಸತ್ಯವನ್ನೇ ಹೇಳತಕ್ಕ ಮತ್ತು ಸರ್ವಸಮದೃಷ್ಟಿಯುಳ್ಳ 'ಟ್ರೂತ್' ಪತ್ರಿಕೆಯು ಸರ್ಕಾರಿ ಮುದ್ರಾಲಯಗಳ ಸೂಪರಿಂಟೆಂಡೆಂಟರಾದ ರಾಮಚಂದ್ರಮೊದಲಿಯಾರ್ರು ಬಹಳ ವಿದ್ಯಾವಂತರು ಮತ್ತು ಸರ್ವ ಸಮದೃಷ್ಟಿಯುಳ್ಳವರೆಂದು ಕೇಳಿದ್ದೇವೆ ಇವರಮೇಲೆ ಆರೋಪಿಸಲ್ಪಟ್ಟ ಆಕ್ಷೇಪಣೆಗಳಿಗೆ ಇವರು ಕಾರಣಭೂತರಾದರೆ ಸರಕಾರದವರು ಇದನ್ನು ವಿಚಾರಿಸುವುದು ಒಳ್ಳೆಯದು॥ ಮೊದಲಿಯಾರ್ರು ತಪ್ಪಿತಸ್ಥರಲ್ಲದ ಪಕ್ಷಕ್ಕೆ ಅವರ ಮೇಲೆ ದೋಷಾರೋಪಣೆಯನ್ನು ಮಾಡುವ ಪತ್ರಿಕೆಗೆ ತಕ್ಕ ಶಿಕ್ಷೆಯನ್ನು ಸರಕಾರದವರು ವಿಧಿಸುವುದು ಯುಕ್ತವಲ್ಲವೇ ಎಂಬುದಾಗಿ ಅನೇಕರು ಕೇಳುತ್ತಾರೆ. ಇದು ನಿಜವೆಂದು ನಮಗೆ ತೋರುತ್ತದೆ.

Printed and Published by Mr. M. S. Krishna Rao, at the *Satyavadi* Press Yelwal Road, Sivarampet, Mysore.